2. ಪ್ರಕಟಣೆ

ವಿಷಯ: ಅಧ್ಯಕ್ಷರ ನಾಮನಿರ್ದೇಶನ

ಹಂಗಾಮಿ ಅಧ್ಯಕ್ಷರು: ಕರ್ನಾಟಕ ವಿಧಾನಸಬೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಪ್ರಕಾರ ಈ ಕೆಳಕಂಡ ಮಾನ್ಯ ವಿಧಾನಸಭಾ ಸದಸ್ಯರುಗಳನ್ನು. ಅಧ್ಯಕ್ಷತೆ ವಹಿಸುವವರ ಪಟ್ಟಿಗೆ ನಾಮ ನಿರ್ದೇಶನ ಮಾಡಿದೆ.

1. ಶ್ರೀ ಎನ್. ಯೋಗಿಶ್ ಭಟ್

2. ಶ್ರೀ ಬೆಲ್ಲದ್ ಚಂದ್ರಕಾಂತ್

3. ಶ್ರೀ ಅಪ್ಪಾಜಿ ಆಲಿಯಾಸ್ ಚನ್ನಬಸವರಾಜ್ ಶಂಕರ್‌ಗೌಡ ನಾಡಗೌಡ

4. ಶ್ರೀ ಹೆಚ್.ಕೆ ಕುಮಾರಸ್ವಾಮಿ

5. ಡಾ: ಜಿ. ಪರಮೇಶ್ವರ್

3. ಸದಸ್ಯರ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

ಹಂಗಾಮಿ ಅಧ್ಯಕ್ಷರು : ಕಾರ್ಯದರ್ಶಿಯವರು ಈಗ ಮಾನ್ಯ ಸದಸ್ಯರುಗಳ ಹೆಸರನ್ನು ಕರೆಯಬಹುದು.

ಶ್ರೀ ಎಸ್.ಬಿ. ಪಾಟೀಲ್ (ಕಾರ್ಯದರ್ಶಿ(ಪ್ರ). ಕರ್ನಾಟಕ ವಿಧಾನಸಭೆ) ; ಮಾನ್ಯ ಸಭಾಧ್ಯಕ್ಷರೇ. ತಮ್ಮ ಅಪ್ಪಣೆ ಪಡೆದು ಈಗ ಪ್ರಮಾಣ ವಚನ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಗುವುದು. ಮೊದಲಿಗೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಶ್ರೀ ಬಿ.ಎಸ್. ಯಡಿಯೂರಪ್ಪ ಎಂಬ ಹೆಸರಿನವನಾದ ನಾನು ವಿಧಾನಸಭೆಯ ಸದಸ್ಯನಾಗಿ ನಿರ್ವಾಚನ ಹೊಂದಿದವನಾಗಿ ವಿಧಿದ್ವಾರ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ. ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ. ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ. ನಾನು